

ಈ ನೇರ ಮಾತಿನ ದಾವೆಯೇ ಅಚ್ಚರಿ, ಗಾಬರಿ ಮೂಡಿಸಿತ್ತು.

ಸಂಸಾರದಲ್ಲಿ, ವೈಯಕ್ತಿಕ ಸಂಬಂಧದಲ್ಲಿ ಹೀಗೆ ಮೋಸ–ವಂಚನೆಗೆ ಒಳಗಾದಾಗ, 'ಅವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕು; ಅವನಿಗೆ ತಾನು ಮಾಡಿದ್ದು ತಪ್ಪು ಅಂತ ತಿಳಿಯಬೇಕು' ಅನ್ನುವ ಯೋಚನೆ ಹಲವರಲ್ಲಿ ಬಂದುಬಿಡುತ್ತದೆ. 'ಹಾಗಾದಾಗ ಮಾತ್ರ ತನಗೆ ಆದ ವಂಚನೆಗೆ ನ್ಯಾಯ ಸಿಗುತ್ತದೆ' ಎಂಬ ಭಾವನೆ ಅದು. ಆದರೆ ಈ ಹೋರಾಟದ ಕೊನೆಯಲ್ಲಿ ಅವರು ಪಾಠ ಕಲಿತಿರುತ್ತಾರೋ ಇಲ್ಲವೋ, ಇವರು ಮಾತ್ರ ಸಮಯ, ಹಣ ಕಳಕೊಂಡು, ಹೈರಾಣಾಗಿರುತ್ತಾರೆ. ಅದರ ಬದಲಾಗಿ, 'ಈತ ಹೀಗೆ ಎಂದು ತಿಳಿಯಿತು. ಮುಂದೆ ಜೀವನ ನಡೆಯುವ ಬಗೆ ಹೇಗೆ? ಮಕ್ಕಳನ್ನು ನೋಡಿಕೊಳ್ಳುವುದು ಹೇಗೆ? ಆ ನಿಟ್ಟಿನಲ್ಲಿ ನಮ್ಮ ಹಕ್ಕುಗಳೇನು? ಅದನ್ನು ಪಡೆಯುವ ದಾರಿ ಯಾವುದು?' ಎಂಬ ಪ್ರಶ್ನೆಗಳಿಗೆ ಮುಖಾಮುಖಿಯಾದರೆ ಮುಂದಿನ ದಾರಿ ಸುಲಭ.

ಹೆಂಡತಿಯಾದವಳಿಗೆ ಜೀವನಾಂಶವನ್ನು ಒದಗಿಸುವ ಜವಾಬ್ದಾರಿ ಗಂಡನದ್ದು ಎನ್ನುತ್ತದೆ ಕಾನೂನು. ಅದೇ ಕಾನೂನಿನ ಪ್ರಕಾರ, ಜೀವನಾಂಶವೆಂದರೆ, ಆಕೆ ಬೀದಿಗೆ ಬಾರದಂತೆ ನೋಡಿಕೊಳ್ಳಬೇಕಾಗುವಲ್ಲಿ ವ್ಯಯಿಸಬೇಕಾಗಿಬರುವ ಹಣ. ಬಹಳಷ್ಟು ಜನರು ಗ್ರಹಿಸಿರುವಂತೆ, ಗಂಡನ ಹಣದಲ್ಲಿ, ದುಡಿಮೆಯಲ್ಲಿ, ಆಸ್ತಿಯಲ್ಲಿ ಅರ್ಧ ಪಾಲು ಅಲ್ಲ ಅಥವಾ ಯಾವುದೇ ಪರಿಹಾರವೂ ಅಲ್ಲ. ಹಾಗಾಗಿ, ಹೆಂಡತಿಯಾದವಳು, ತನ್ನನ್ನು ನೋಡಿಕೊಳ್ಳುವಷ್ಟು ಆಕೆ ದುಡಿಯಬಲ್ಲಳಾದರೆ, ತನ್ನ ಜೀವನಾಂಶವನ್ನೂ ಆಕೆ ಕೇಳುವಂತಿಲ್ಲ. ಹಾಗೆ ನೋಡಿದರೆ, ಕಾನೂನು ಸಮ್ಮತವಾದ ಹೆಂಡತಿಗೂ, ಗಂಡನ ಸ್ವಂತ ಆಸ್ತಿಯಲ್ಲಿ ಅರ್ಧ ಭಾಗ ಕೇಳುವ ಹಕ್ಕು ಇಲ್ಲ. ಇದು ಸರಿಯೇ ತಪ್ಪೇ ಎನ್ನುವುದು ಬೇರೆಯ ವಿಷಯ. ಆದರೆ, ಕಾನೂನು ಇರುವುದು ಹೀಗೆ. ಕಾರಣ ಇಂತಹ ವಿಷಯಗಳನ್ನು ಕಕ್ಷಿದಾರರಿಗೆ ಮನವರಿಕೆ ಮಾಡಿಸಿ, ಪೊಲೀಸ್ ಸ್ಟೇಶನ್, ನ್ಯಾಯಾಲಯಗಳು, ಅಥವಾ ದಾವೆಗಳಲ್ಲಿ ತಮ್ಮ ಜೀವನವನ್ನು ಹಾಳುಮಾಡಿಕೊಳ್ಳದಂತೆ ಮಾರ್ಗದರ್ಶನ ನೀಡುವಲ್ಲಿ ನ್ಯಾಯವಾದಿಗಳ ಜವಾಬ್ದಾರಿಯೂ ಇದೆ.

ನೀಲಿಮಾ ಅಂತೂ, 'ಆ ಮೊದಲ ಭೇಟಿಯಲ್ಲಿ ನಮ್ಮ ನಡುವೆ ನಡೆದ ಮಾತುಕತೆ, ಗೆಳತಿಯರ ನಡುವೆ ನಡೆದಂತಿತ್ತು. ನಿಮ್ಮ ಸಲಹೆ, ಮಾರ್ಗದರ್ಶನಕ್ಕೆ ನಾನು ಸದಾ ಋಣಿ ಮೇಡಂ' ಅಂದಿದ್ದಳು.

ಮೊದಲನೇ ಹೆಂಡತಿ ಇರುವಾಗ ಆದ ಎರಡನೇ ಮದುವೆ ಅಥವಾ ಮಾದುವೆಯಾಚೆಗಿನ ಸಂಬಂಧ ಅಥವಾ ಮದುವೆಯಾಗದೇ ಇರುವ ಸಂಬಂಧವನ್ನು ಕಾನೂನುಬಾಹಿರ ಸಂಬಂಧವೆಂದೂ, ಅಂತಹ ಸಂಬಂಧದಲ್ಲಿ ಹುಟ್ಟಿದ ಮಕ್ಕಳನ್ನು ಕಾನೂನು ಸಮ್ಮತವಲ್ಲದ ಮಕ್ಕಳು ಎಂದೂ ಕರೆಯಲಾಗುತ್ತದೆ. ಸಮಾಜದ ದೃಷ್ಟಿಯಲ್ಲಿ ಇದನ್ನು ಹಾದರ ಎನ್ನುತ್ತೇವೆ. ತಪ್ಪು, ಅನೈತಿಕ ಎಂದು ನೋಡುತ್ತೇವೆ. ಆದರೆ, ಎಷ್ಟೋ ವ್ಯಕ್ತಿಗಳಿಗೆ ಎರಡನೇ ಸಂಬಂಧವಿರುತ್ತದೆ; ಮಕ್ಕಳೂ ಇರುತ್ತಾರೆ. ಇದು ಸಾಮಾನ್ಯ. ಹಾಗೆಯೇ ಅಂತಹ ಸಂಬಂಧದಲ್ಲಿ ಹುಟ್ಟಿದ ಮಕ್ಕಳಿಗೆ ಹಕ್ಕುಗಳೂ ಇರುತ್ತವೆ.

ಪ್ರತಿಕ್ರಿಯಿಸಿ: feedback@sudha.co.in

## ಕಾನೂನು ಸಮ್ಮತವಲ್ಲದ ಹೆಂಡತಿ-ಮಕ್ಕಳ ಹಕ್ಕುಗಳು

- ಕಾನೂನು ಸಮ್ಮತವಲ್ಲದ ಮಕ್ಕಳನ್ನೂ ನೋಡಿಕೊಳ್ಳುವ ಜವಾಬ್ದಾರಿ ಅಪ್ಪನಾದವನಿಗೆ ಇದೆ ಎಂದು
- ಸಿ.ಆರ್.ಪಿ.ಸಿ.ಯ ಸೆ.125 ಹೇಳುತ್ತದೆ. ಅಂದರೆ, ಅಂತಹ ಮಕ್ಕಳಿಗೆ ಪ್ರತಿದಿನದ ಜೀವನಕ್ಕೆ ಬೇಕಾಗುವ ಹಣ, ಶಿಕ್ಷಣಕ್ಕೆ ತಗಲುವ ಖರ್ಚು, ಆರೋಗ್ಯಕ್ಕೆ, ಆಸ್ಪತ್ರೆ ಖರ್ಚುಗಳಿಗೆ ಸಂಬಂಧಿಸಿದ ಹಣ – ಇವುಗಳನ್ನು, ತಂದೆಯಾದವನ ದುಡಿಮೆಗೆ ಅನುಸಾರವಾಗಿ ಆತ ಮಕ್ಕಳಿಗೆ ಒದಗಿಸಬೇಕು ಎನ್ನುತ್ತದೆ ಕಾನೂನು.
- 'ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರನ್ನು ರಕ್ಷಿಸುವ ಕಾಯಿದೆಯ ಪ್ರಕಾರ ಒಂದೇ ಮನೆಯಲ್ಲಿ ಜೀವನ
- ಮಾಡುವ ಎಲ್ಲರೂ ಕುಟುಂಬದ ಭಾಗವೇ ಆಗುತ್ತಾರೆ. ಅಂತೆಯೇ, ಮದುವೆಯಾಗದ ಸಂಗಾತಿ, ಮದುವೆಯಾಚೆಗಿನ ಸಂಬಂಧ ಕೂಡಾ ಕುಟುಂಬದ ಭಾಗವೇ. ಹಾಗಾಗಿ ಅಂತಹ ಸಂಬಂಧದಲ್ಲಿ ದೌರ್ಜನ್ಯವಾದರೆ, ಅಂತಹ ಮಹಿಳೆ ತನಗಾದ ದೌರ್ಜನ್ಯದ ವಿರುದ್ಧ ದಾವೆ ಹೂಡಬಹುದು. ದೌರ್ಜನ್ಯ ತಡೆಗಟ್ಟುವಂತೆ ಆದೇಶ ತರಬಹುದು. ಆದ ದೌರ್ಜನ್ಯಕ್ಕೆ ಪರಿಹಾರ ಕೇಳಬಹುದು.
- ತಂದೆ ಹಿಂದೂ ಆಗಿದ್ದು, ಆತನಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಿದ್ದರೆ, ಅದರಲ್ಲಿ ಮಾತ್ರ ಕಾನೂನು ಸಮ್ಮತವಲ್ಲದ ಹೆಂಡತಿ, ಮಕ್ಕಳಿಗೆ ಭಾಗ ಕೇಳುವ ಸಮಾನ ಹಕ್ಕು ಇರುವುದಿಲ್ಲ. ಇದೊಂದನ್ನು ಬಿಟ್ಟರೆ, ಕಾನೂನು ಸಮ್ಮತವಾದ ಹೆಂಡತಿ ಮಕ್ಕಳ ಹಕ್ಕುಗಳಿಗೂ, ಕಾನೂನು ಸಮ್ಮತವಲ್ಲದ ಹೆಂಡತಿ ಮಕ್ಕಳ ಹಕ್ಕುಗಳಿಗೂ ಹೆಚ್ಚಿನ ವ್ಯತ್ಯಾಸವಿಲ್ಲ.